# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1378 |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 22.08.2025 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ವಿಧಾನಸಭಾ ಕ್ಷೇತ್ರಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳ ಸಂಖ್ಯೆ ಹೆಚ್ಚಿಸುವ/ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: | ರಾಯಚೂರು ಜಿಲ್ಲೆ ಸಿಂಧನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಮೆಟ್ರಿಕ್ ನಂತರದ ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ವಿದ್ಯಾರ್ಥಿಗಳಿಗಾಗಿ ಹೊಸ ವಸತಿ ನಿಲಯಗಳ ಮಂಜೂರಾತಿ ಕೋರಿ ಹಾಗೂ ಸಂಖ್ಯಾ ಬಲ ಹೆಚ್ಚಿಸುವಂತೆ ಕೋರಿ ಜಿಲ್ಲೆಯಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |
| ಆ) | ಇದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; ಒಂದು ವಸತಿ ನಿಲಯಕ್ಕೆ ಎಷ್ಟು ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರದ ಅನುಮೋದನೆ ಇದೆ; | |
| ಇ) | ಯಾವ ಯಾವ ವಸತಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ಹಾಜರಾತಿ ಮಾಡಿಕೊಳ್ಳಲಾಗಿದೆ; ಒಬ್ಬ ವಿದ್ಯಾರ್ಥಿಗೆ ಸರ್ಕಾರದಿಂದ ನೀಡುವ ಅನುದಾನ ಎಷ್ಟು; | ಸಿಂಧನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 4 ಮೆಟ್ರಿಕ್ ಪೂರ್ವ ಹಾಗೂ 6 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 10 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಿದ್ಯಾರ್ಥಿನಿಲಯಗಳಿಗೆ ಕ್ರಮವಾಗಿ 210 ಹಾಗೂ 793 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದೆ. ವಿದ್ಯಾರ್ಥಿನಿಲಯವಾರು ವಿವರ ಈ ಕೆಳಕಂಡಂತಿವೆ. |

| ಕ್ರ.ಸಂ | ವಿದ್ಯಾರ್ಥಿನಿಲಯ ಹೆಸರು | ಮಂಜೂರಾತಿ ಸಂಖ್ಯೆ |
|---|---|---|
| 1 | ಮೆಟ್ರಿಕ್ ಪೂ ಂವ ಬಾಲಕರ ವಿದ್ಯಾರ್ಥಿನಿಲಯ, ಅಂಭಾಮಠ | 50 |
| 2 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜವಳಗೇರಾ | 50 |
| 3 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಿಂಧನೂರು | 60 |
| 4 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧನೂರು | 50 |
| 5 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ,ಸಿಂಧನೂರು | 156 |

| | | |
|---|---|---|
| 6 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಪಿಡಬ್ಲ್ಯೂಡಿ ಕ್ಯಾಂಪ್,ಸಿಂಧನೂರು | 156 |
| 7 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಸುಕಾಲಪೇಟೆ, ಸಿಂಧನೂರು | 156 |
| 8 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧನೂರು | 125 |
| 9 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧನೂರು ಟೌನ್ | 100 |
| 0 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ತುರ್ವಿಹಾಳ | 100 |

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗುವ ಪ್ರತಿ ವಿದ್ಯಾರ್ಥಿಗೆ ವೆಚ್ಚ ಮಾಡಲಾಗುವ ಮೊತ್ತದ ವಿವರಗಳು ಈ ಕೆಳಕಂಡಂತಿವೆ.

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗೆ ರೂ.1750/ ರಂತೆ ಮಾಸಿಕ ಭೋಜನಾ ವೆಚ್ಚ
2. ಮೆಟ್ರಿಕ್ ನಂತರದ ವಿದ್ಯಾರ್ಥಿಗೆ ರೂ.1850/ ರಂತೆ ಮಾಸಿಕ ಭೋಜನಾ ವೆಚ್ಚ
3. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಎರಡು ತಿಂಗಳಿಗೊಮ್ಮೆ ಕ್ಷೌರ ವೆಚ್ಚಕ್ಕಾಗಿ- ರೂ.60/-ರಂತೆ (ವಾರ್ಷಿಕವಾಗಿ 5 ಬಾರಿ ಮಾತ್ರ) ನೀಡಲಾಗುತ್ತದೆ.
4. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ರೂ.400/-ರ ವೆಚ್ಚದಲ್ಲಿ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ ನೀಡಲಾಗುತ್ತದೆ.
5. ವಿದ್ಯಾರ್ಥಿನಿಲಯಗಳಲ್ಲಿನ ಬಾಲಕರ ವಿದ್ಯಾರ್ಥಿಗಳಿಗೆ ಮಾಸಿಕ ರೂ.126/- ವೆಚ್ಚದಲ್ಲಿ ನಿರ್ಮಲ ಕಿಟ್ ಮತ್ತು ಬಾಲಕಿಯರ ವಿದ್ಯಾರ್ಥಿಗಳಿಗೆ ಮಾಸಿಕ ರೂ.144/- ಗಳ ವೆಚ್ಚದಲ್ಲಿ ಸಿರಿಗಂಧ ಕಿಟ್ ನೀಡಲಾಗುತ್ತದೆ.
6. ವೈದ್ಯಕೀಯ ಸೌಲಭ್ಯ ಒದಗಿಸಲು (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕವಾಗಿ) ಈ ಕೆಳಕಂಡಂತೆ ವೆಚ್ಚವನ್ನು ನೀಡಲಾಗುತ್ತದೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.5,000/- |
| 51 ಕ್ಕೂ ಮೇಲ್ಪಟ್ಟು | ರೂ.10,000/- |

7. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಸುಸಜ್ಜಿತ ಗ್ರಂಥಾಲಯ ವ್ಯವಸ್ಥೆಯನ್ನು ಕಲ್ಪಿಸಲು ಈ ಕೆಳಕಂಡಂತೆ ವೆಚ್ಚವನ್ನು ಮಾಡಲಾಗುತ್ತಿದೆ.

| ವಿವರ | ಪ್ರಥಮ ಬಾರಿಗೆ | ನಂತರದ ಪ್ರತಿ ವರ್ಷಕ್ಕೆ |
|---|---|---|
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | ರೂ.50,000/- | ರೂ.5,000/- |

| | |
|---|---|---|
| ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು | ರೂ.1.00 ಲಕ್ಷ | ರೂ.20,000/- |
| ಸ್ನಾತಕೋತ್ತರ / ವೃತ್ತಿಪರ ವಿದ್ಯಾರ್ಥಿ ನಿಲಯಗಳಿಗೆ | ರೂ.1.25 ಲಕ್ಷ | ರೂ.30,000/- |

8. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಶೌಚಾಲಯಗಳ / ಆವರಣದ ಸ್ವಚ್ಛತೆಗೆ ಪ್ರತಿ ವಿದ್ಯಾರ್ಥಿ ನಿಲಯಕ್ಕೆ (ಪ್ರತಿ ತಿಂಗಳಿಗೆ) ಈ ಕೆಳಕಂಡಂತೆ ವೆಚ್ಚ ಮಾಡಲಾಗುತ್ತಿದೆ.

| ವಿವರ | ತಗಲುವ ವೆಚ್ಚ |
|---|---|
| 50 ಸಂಖ್ಯಾಬಲದ ವರೆಗೆ | ರೂ.1,000/- |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.1,250/- |
| 101 ರಿಂದ 150 ರವರೆಗೆ | ರೂ.1,500/- |
| 151 ಕ್ಕೂ ಮೇಲ್ಪಟ್ಟು | ರೂ.2,000/- |
| ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಲು (ವಾರ್ಷಿಕ) | ರೂ.5,000/- |

9. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಸ್ವಚ್ಛತಾ ಸಾಮಾಗ್ರಿಗಳಿಗಾಗಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ (ಪ್ರತಿ ತಿಂಗಳಿಗೆ) ಈ ಕೆಳಕಂಡಂತೆ ವೆಚ್ಚ ಮಾಡಲಾಗುತ್ತಿದೆ.

| ವಿವರ | ತಗಲುವ ವೆಚ್ಚ |
|---|---|
| 50 ಸಂಖ್ಯಾಬಲದ ವರೆಗೆ | ರೂ.500/- |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.750/- |
| 101 ರಿಂದ 150 ರವರೆಗೆ | ರೂ.1000/- |
| 151 ಕ್ಕೂ ಮೇಲ್ಪಟ್ಟು | ರೂ.1250/- |

10. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಈ ಕೆಳಕಂಡ ವಾರ್ತಾಪತ್ರಿಕೆ ಮತ್ತು ನಿಯತಕಾಲಿಕೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

| |
|---|
| ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆ -1 |
| ರಾಜ್ಯ ಮಟ್ಟದ ಇಂಗ್ಲೀಷ್ ದಿನಪತ್ರಿಕೆ -1 |
| Wisdom – magazine -1 |

11. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಈ ಕೆಳಕಂಡ ವಾರ್ತಾಪತ್ರಿಕೆ ಮತ್ತು ನಿಯತಕಾಲಿಕೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

| |
|---|
| ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆ-1 |
| ರಾಜ್ಯ ಮಟ್ಟದ ಇಂಗ್ಲೀಷ್ ದಿನಪತ್ರಿಕೆ-1 |
| Employment News -1 |
| Competition Success Review/ Wizard -1 |
| Mirror Magazine -1 |

| | | |
|---|---|---|
| ಈ) | ಈಗಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಅನುದಾನ ಎಷ್ಟು; | ಸಿಂಧನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಕಳೆದ 3 ವರ್ಷಗಳಲ್ಲಿ ರೂ.8.39 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |

<table>
<tr><td>ಉ)</td><td>ಇವುಗಳಲ್ಲಿ ಸ್ವಂತ ಕಟ್ಟಡಗಳೆಷ್ಟು ಮತ್ತು ಬಾಡಿಗೆ ಕಟ್ಟಡಗಳೆಷ್ಟು:</td><td rowspan="2">ಸಿಂಧನೂರು ವಿಧಾನಸಭಾಕ್ಷೇತ್ರ ವ್ಯಾಪ್ತಿಯಲ್ಲಿ 10 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 6 ಸ್ವಂತ ಕಟ್ಟಡಗಳಲ್ಲಿ ಹಾಗೂ 4 ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯ ಕಟ್ಟಡಗಳಿಗೆ ಪಾವತಿ ಮಾಡಲಾಗುತ್ತಿರುವ ಬಾಡಿಗೆಯ ವಿವರಗಳು ಈ ಕೆಳಕಂಡಂತಿವೆ.
<table>
<tr><th>ವಿದ್ಯಾರ್ಥಿನಿಲಯ ವಿವರ</th><th>ಮಾಹೆಯಾನ ಪಾವತಿಸುತ್ತಿರುವ ವಿವರ</th><th>ಯಾವ ಮಾಹೆಯಿಂದ ಬಾಡಿಗೆ ಪಾವತಿ ಮಾಡಿರುವ ವಿವರ</th></tr>
<tr><td>ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧನೂರು</td><td>1,46,000/-</td><td>ಮಾರ್ಚ-2017</td></tr>
<tr><td>ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧನೂರು</td><td>1,45,973/-</td><td>ಮಾರ್ಚ-2017</td></tr>
<tr><td>ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಸಿಂಧನೂರು ಟೌನ್</td><td rowspan="2">-</td><td rowspan="2">ಬಾಡಿಗೆ ನಿಗದಿಯಾಗಿರುವುದಿಲ್ಲ.</td></tr>
<tr><td>ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ತುರ್ವಿಹಾಳ</td></tr>
</table>
</td></tr>
<tr><td>ಊ)</td><td>ಎಷ್ಟು ಬಾಡಿಗೆ ಪಾವತಿ ಮಾಡುತ್ತಿದ್ದೀರಿ ಮತ್ತು ಎಷ್ಟು ವರ್ಷದಿಂದ ಗುತ್ತಿಗೆದಾರರಿಗೆ ನೀಡಲಾಗಿದೆ?</td></tr>
</table>

ಸಂಖ್ಯೆ: ಹಿಂವಕ 870 ಬಿಎಂಎಸ್ 2025

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು